ಮಾಡತಕ್ಕದ್ದಲ್ಲ. ಅಂಥ ಎಲ್ಲ ಭೂಮಿಗಳನ್ನು ಬೆಳೆಯುತ್ತಿರುವ ನಗರ ಅಥವಾ ಪಟ್ಟಣಗಳ ಸಾರ್ವಜನಿಕ ಅಗತ್ಯತೆಗಳಿಗೆ ಒದಗಿಸಲು ಸಾರ್ವಜನಿಕ ಅಥವಾ ಸರ್ಕಾರಿ ಉದ್ದೇಶಗಳಿಗಾಗಿ ಮೀಸಲಿಡತಕ್ಕದ್ದು ಎಂದು ತಿಳಿಸಲಾಗಿದೆ. ಆದ್ದರಿಂದ ಈ ಪಟ್ಟಣ/ನಗರ ಮಿತಿಯಲ್ಲಿನ ಜಮೀನುಗಳು ಮಂಜೂರಾತಿಸಲು ಅವಕಾಶವಿಲ್ಲದಿರುವುದರಿಂದ, ಇಂಥಹ ಜಮೀನುಗಳನ್ನು ಸ್ಕ್ರಮಗೊಳಿಸುವ ಉದ್ದೇಶ ಸರ್ಕಾರದ ಮುಂದಿರುವುದಿಲ್ಲ.

402 (646) ಶ್ರೀ ಜಯಪ್ರಕಾಶ್ ಹೆಗ್ಡೆ (ಬ್ರಹ್ಮಾವರ): ಮಾನ್ಯ ಕಂದಾಯ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತಾಲ್ಲೂಕು ಕಛೇರಿ ಭೂಮಿ/ಕಿಯಾಸ್ಕ್ ಕೇಂದ್ರಗಳಲ್ಲಿ ಸಿಬ್ಬಂದಿ ಕೊರತೆಯಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ :

ಆ) ಬಂದಿದ್ದಲ್ಲಿ, ಈ ಬಗ್ಗೆ ಸರ್ಕಾರದ ನಿಲುವೇನು ಮತ್ತು ಈವರೆಗೂ ಸರ್ಕಾರವು ಕೈಗೊಂಡ ಕ್ರಮಗಳೇನು (ವಿವರ ಒದಗಿಸುವುದು) ?

ಶ್ರೀ ಜಗದೀಶ್ ಶೆಟ್ಟರ್ (ಕಂದಾಯ ಸಚಿವರು) :

ಅ) ಇಲ್ಲ.

ಆ) ಭೂಮಿ ಕೇಂದ್ರವು ನಿರ್ದಿಷ್ಟ ಸಿಬ್ಬಂಧಿ ವಿನ್ಯಾಸ ಹೊಂದಿರುವುದಿಲ್ಲ. ಭೂಮಿ ಕೆಲಸ ಕಾರ್ಯಗಳಿಗೆ ಸಿಬ್ಬಂದಿಯ ಕೊರತೆ ಕಂಡುಬಂದಿರುವುದಿಲ್ಲ. ಹೆಚ್ಚುವರಿ ಸಿಬ್ಬಂದಿಯ ಅವಶ್ಯಕತೆ ಕಂಡುಬಂದಲ್ಲಿ, ತಾಲ್ಲೂಕು/ಜಿಲ್ಲಾ ಆಡಳಿತವು ಭೂಮಿ ಕೇಂದ್ರಗಳಿಗೆ ನಿಯೋಜಿಸಲು ಸಿಬ್ಬಂದಿಯನ್ನು ಗುರುತಿಸಿದಲ್ಲಿ, ಈ ಸಿಬ್ಬಂದಿಗೆ ರಾಜ್ಯ ಮಟ್ಟದಲ್ಲಿ ಕಂದಾಯ ಇಲಾಖೆಯು ತರಬೇತಿ ನೀಡುತ್ತದೆ.

403 (649) ಶ್ರೀ ಕ್ಯಾತ್ಸಂದ್ರ ಎನ್. ರಾಜಣ್ಣ (ಬೆಳ್ಳಾವಿ): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಗಿನ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿ ಕೈಗಾರಿಕೆ ತಡೆಗಟ್ಟಲು ಸರ್ಕಾರ ತೆಗೆದು ಕೊಂಡಿರುವ ಕ್ರಮವೇನು :

ಆ) ಅಕ್ರಮ ಗಣಿಗಾರಿಕೆಯ ಪ್ರಕರಣಗಳ ವಿವರ ನೀಡುವುದು;

ಇ) ಅಕ್ರಮ ಗಣಿಗಾರಿಕೆದಾರರ ವಿಳಾಸ ಮತ್ತು ಅವರುಗಳಿಂದ ವಸೂಲಿ ಮಾಡಲಾದ ದಂಡದ ಮೊತ್ತವೆಷ್ಟು? (ಕಳೆದ ಮೂರು ವರ್ಷಗಳ ವರ್ಷವಾರು ವಿವರ ನೀಡುವುದು)

ಶ್ರೀ ಸಿ. ಚೆನ್ನಿಗಪ್ಪ (ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು) :

ಅ) ತುಮಕೂರು ಜಿಲ್ಲೆಯ ಅರಣ್ಯ ಭೂಮಿಯಲ್ಲಿ ಅಕ್ರಮ ಗಣಿಗಾರಿಕೆಯನ್ನು ತಡೆಗಟ್ಟಲು ಅರಣ್ಯ ಇಲಾಖೆ, ಕಂದಾಯ ಇಲಾಖೆ ಹಾಗೂ ಗಣಿ ಮತ್ತು ಭೂವಿಜ್ಞಾನ ಇಲಾಖೆ ಮತ್ತು ಗಣಿ ಮಾಲೀಕರ ಸಮಕ್ಷಮ ಜಂಟಿ ಸರ್ವೆ ನಡೆಸಿದ್ದು ಈ ಜಂಟಿ ಸರ್ವೆಯ ನಂತರ ಅರಣ್ಯ ಇಲಾಖಾ ಸಿಬ್ಬಂದಿಯವರು ಕಾಂಕ್ರೀಟ್ ಕಂಬಗಳನ್ನು ನೆಟ್ಟಿ ಅರಣ್ಯ ಗಡಿಯನ್ನು ಗುರುತಿಸಿಕೊಂಡು

ಅಕ್ರಮ ಗಣಿಗಾರಿಕೆ ನಡೆಯದಂತೆ ಕಟ್ಟೆಚ್ಚರ ವಹಿಸಲಾಗಿರುತ್ತದೆ. ಅಲ್ಲದೆ ದಿನಾಂಕ:16.11.2005 ರಲ್ಲಿ ಸರ್ಕಾರಿ ಆದೇಶವನ್ನು ಹೊರಡಿಸಿ ರಾಜ್ಯ ಮಟ್ಟದಲ್ಲಿ ಮತ್ತು ಜಿಲ್ಲಾ ಮಟ್ಟದಲ್ಲಿ ಟಾಸ್ಕ್ ಫೋರ್ಸ್ ಪಡೆಯನ್ನು ನಿರ್ಮಿಸಿದ್ದು, ಅದರಂತೆ ಅಕ್ರಮ ಗಣಿಗಾರಿಕೆಯನ್ನು ತಡೆಯಲು ಎಲ್ಲಾ ರೀತಿಯ ಕಟ್ಟುನಿಟ್ಟಿನ ಕ್ರಮವನ್ನು ತೆಗೆದುಕೊಳ್ಳಲಾಗಿದೆ.

ಆ)(ಇ) ಕಳೆದ ಮೂರು ವರ್ಷಗಳಲ್ಲಿ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಗೆ ಪ್ರಯತ್ನಿಸಿದವರಿಂದ ವಸೂಲು ಮಾಡಲಾದ ದಂಡ ಮತ್ತು ಮೌಲ್ಯದೊಂದಿಗೆ ಅರಣ್ಯ ಪ್ರದೇಶದಲ್ಲಿ ಅಕ್ರಮ ಗಣಿಗಾರಿಕೆಗೆ ಪ್ರಯತ್ನಿಸಿದವರ ವಿವರವನ್ನು ಸಲ್ಲಿಸಲಾಗಿದೆ.

ಕ್ರ. ಸಂ.	ವರ್ಷ	ಮೊತ್ತ	ದಂಡ	ಒಟ್ಟು
1	2003–04	–	–	–
2	2004–05	49000	179500	228500
3	2005–06	16500	82565	99065

ಕಳೆದ ಮೂರು ವರ್ಷಗಳಿಂದ ಅಕ್ರಮ ಗಣಿಗಾರಿಕೆಯಲ್ಲಿ ತೊಡಗಿರುವವರ ಹೆಸರು, ವಿಳಾಸ ಮತ್ತು ವಸೂಲಿ ಮಾಡಲಾದ ದಂಡದ ಮೊತ್ತ (ರೂ.ಗಳಲ್ಲಿ)

ವರ್ಷ	ಹೆಸರು ವಿಳಾಸ	ದಂಡ (ರೂ)
2003–04	ಯಾವುದೇ ಅಕ್ರಮ ಗಣಿಗಾರಿಕೆಗಳು ನಡೆದಿರುವುದಿಲ್ಲ	
2004–05	1. ಶ್ರೀ ಮಂಜುನಾಥ ಬಿನ್ ಗಿರಿಯಪ್ಪ ಕೊಪ್ಪ	7.000
	2. ಶ್ರೀ ಲಿಂಗರಾಜು ಬಿನ್ ಕುಪ್ಪೂರು ಲಿಂಗಯ್ಯ ಮತ್ತು ಇತರರು. ತಿಪಟೂರು	*
	3. ಮೆ॥ ಕರ್ನಾಟಕ ಮೈನಿಂಗ್ ಕಂ., (ಗಣಿ ಗುತ್ತಿಗೆ ಸಂಖ್ಯೆ 2333)	73000
	4. ಮೆ॥ ಲತಾ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 958)	*
	5. ಮೆ॥ ಕಮಲಾಬಾಯಿ ಮೈನ್ಸ್, (ಗಣಿ ಗುತ್ತಿಗೆ ಸಂಖ್ಯೆ 1700)	*

ವರ್ಷ	ಹೆಸರು ವಿಳಾಸ	ದಂಡ (ರೂ)
	6. ಮೆ॥ ಬಾಲಾಜಿ ಪ್ರೊಡ್ಯೂಸ್ ಕಂ., (ಗಣಿ ಗುತ್ತಿಗೆ ಸಂಖ್ಯೆ 1277)	*
	7. ಮೆ॥ ಕರ್ನಾಟಕ ಮೈನಿಂಗ್ ಕಂ., (ಗಣಿ ಗುತ್ತಿಗೆ ಸಂಖ್ಯೆ 2333)	*
	8. ಮೆ॥ ಸುದರ್ಶನ್ ಸಿಂಗ್ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 1913)	20,261
	9. ಮೆ॥ ಕಮಲಾಬಾಯಿ ವೈನ್ಸ್, (ಗಣಿ ಗುತ್ತಿಗೆ ಸಂಖ್ಯೆ 1700)	73,239
	10. ಮೆ॥ ಬಿ.ಆರ್. ಶಿವಕುಮಾರ್ ಸಿಂಗ್ ಮೈನ್ಸ್, (ಗಣಿ ಗುತ್ತಿಗೆ ಸಂಖ್ಯೆ 2319)	55,000
	11. ಮೆ॥ ಜ್ಯೋತಿ ಬ್ರದರ್ಸ್ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 2363)	*
	12. ಮೆ॥ ದೀಪ್ ಚಂದ್ ಕಿಶನ್ ಲಾಲ್ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 2843)	*
	ಒಟ್ಟು	2,28,500
2005–06	1. ಮೆ॥ ಟಿ.ವಿ.ಸಿ.ಎನ್. ಬ್ರದರ್ಸ್ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 511)	*
	2. ಮೆ॥ ಜ್ಯೋತಿ ಬ್ರದರ್ಸ್ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 2363)	44,000
	3. ಮೆ॥ ಮಹಾಲಕ್ಷ್ಮಿ ಮೈನ್ಸ್, (ಗಣಿ ಗುತ್ತಿಗೆ ಸಂಖ್ಯೆ 1913)	55065
	4. ಮೆ॥ ಲತಾ ಮೈನ್ಸ್, (ಗಣಿ ಗುತ್ತಿಗೆ ಸಂಖ್ಯೆ 958)	*
	5. ಮೆ॥ ಕರ್ನಾಟಕ ಮೈನಿಂಗ್ ಕಂ., (ಗಣಿ ಗುತ್ತಿಗೆ ಸಂಖ್ಯೆ 2333)	*
	6. ಮೆ॥ ಕಮಲಾಬಾಯಿ ಮೈನ್ಸ್ (ಗಣಿ ಗುತ್ತಿಗೆ ಸಂಖ್ಯೆ 1700)	*
	ಒಟ್ಟು	99,065